(102)

(ಕಂದಾಯ ಇಲಾಖೆ)

# ಸಹಾಯಕ ಆಯುಕ್ತರವರ ನ್ಯಾಯಾಲಯ, ಹೊಸಪೇಟೆ.

ಎ.ವಿಲೇ.ಸಂ.ಕಂ.ಪಹಣಿ:ಅಪೀಲು:96/2015-16 ದಿನಾಂಕ:28.04.2016.

**ಉಪಸ್ಥಿತರು: ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ**
**ಸಹಾಯಕ ಅಯುಕ್ತರು, ಹೊಸಪೇಟೆ.**

********

**ವಾದಿಗಳು: ಶ್ರೀ/ ಶ್ರೀಮತಿ**

1] ಕೊಳಚಿ ಷಣ್ಮುಖಪ್ಪ ತಂದೆ ಸಣ್ಣ ವೀರಪ್ಪ,
ಇವರ ಪೋತಿ ವಾರಸುದಾರರು
1ಎ] ಕೆ.ಬಸವರಾಜ ತಂದೆ ಕೆ.ಷಣ್ಮುಖಪ್ಪ,
ವಾಸ: ಜಿ.ಕೋಡಿಹಳ್ಳಿ (ಪೋ),
ಹಗರಿಬೊಮ್ಮನಹಳ್ಳಿ ತಾಲೂಕು,
ಬಳ್ಳಾರಿ ಜಿಲ್ಲೆ.

**ಪ್ರತಿವಾದಿಗಳು: ಶ್ರೀ/ ಶ್ರೀಮತಿ**

1. ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ,
2. ನಿರ್ಲಿಗಿ ವೀರಬಸಪ್ಪ ತಂದೆ ಮಹಾಂತಪ್ಪ, ಜಿ.ಕೋಡಿಹಳ್ಳಿ
3. ಗಂಗಮ್ಮ ಗಂಡ ನಿರ್ಲಿಗಿ ವೀರಬಸಪ್ಪ
4. ವೀರಣ್ಣ ನಿರ್ಲಿಗಿ ತಂದೆ ನಿರ್ಲಿಗಿ ವೀರಬಸಪ್ಪ

ಪ್ರತಿವಾದಿ-2 ರಿಂದ 4 ರವರೆಗಿನವರ ವಾಸ: ಜಿ.ಕೋಡಿಹಳ್ಳಿ (ಪೋ), ಹಗರಿಬೊಮ್ಮನಹಳ್ಳಿ(ತಾ),
ಬಳ್ಳಾರಿ ಜಿಲ್ಲೆ.

**ವ್ಯಾಜ್ಯದ ಜಮೀನು**

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಹಗರಿಬೊಮ್ಮನಹಳ್ಳಿ | ಹಂಪಸಾಗರ | ಜಿ.ಕೋಡಿಹಳ್ಳಿ | 55/9 | 00 ಎಕರೆ 10 ಸೆಂಟ್ಸ್ |

**ಪೀಠಿಕೆ:-**

ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ ಜಿ.ಕೋಡಿಹಳ್ಳಿ ಗ್ರಾಮದ ಸ.ನಂ.55/9 ಪೈಕಿ ವಿಸ್ತೀರ್ಣ:00 ಎಕರೆ 10 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ ಇವರ ಹಿಂಬರಹ ಸಂಖ್ಯೆ: ಸಂ:ಕಂ:ಪಹಣಿ/ಹಳೆಕ್ರಯಪತ್ರ/12/2015-16 ದಿನಾಂಕ:18.08.2015 ವನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ವಾದಿಪರ ವಕೀಲರು ದಿನಾಂಕ:25.08.2015 ರಂದು ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ವಾದಿಗಳು ಸಲ್ಲಿಸಿದ ಕಡತವನ್ನು ಪರಿಶೀಲಿಸಿ, ನೈಸರ್ಗಿಕ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:21.01.2016 ಕ್ಕೆ ನಿಗದಿಪಡಿಸಿ ಉಭಯಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕಡತದಲ್ಲಿಯ ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ಕಂಡು ಬಂದಿರುತ್ತವೆ.

1. ಸದರಿ ವ್ಯಾಜ್ಯದ ಜಮೀನನ್ನು ವಾದಿಯ ತಂದೆಯಾದ ಷಣ್ಮುಖಪ್ಪ ತಂದೆ ಕೊಳಚಿ ಸಣ್ಣ ವೀರಪ್ಪ ಇವರಿಗೆ ಗಂಗಮ್ಮ ಗಂಡ ನೀರ್ಲಿಗಿ ವೀರಬಸಪ್ಪ ಮತ್ತು ವೀರಣ್ಣ ತಂದೆ ನೀರ್ಲಿಗಿ ವೀರಬಸಪ್ಪ ಇವರು ನೋಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ:484/1972-73 ದಿನಾಂಕ:15.06.1972 ರ ಮೂಲಕ ರೂ.1,000/- ಗಳಿಗೆ ಕ್ರಯಕ್ಕೆ ನೀಡಿರುವುದು ಕ್ರಯ ಪತ್ರದ ಪ್ರತಿ ಹಾಗೂ ಇ.ಸಿ.(ನಮೂನೆ-15) ಪ್ರತಿಯಿಂದ ಕಂಡು ಬಂದಿರುತ್ತದೆ.
2. ಕ್ರಯಕ್ಕೆ ಪಡೆದ ದಿನದಿಂದಲೂ ವಾದಿಗಳೇ ಸದರಿ ಜಮೀನಿನಲ್ಲಿ ಉಳುಮೆ ಹಾಗೂ ಸ್ವಾಧೀನಾನುಭವವನ್ನು ಹೊಂದಿರುವುದಾಗಿ ತಿಳಿಸಿದ್ದು ಈ ಬಗ್ಗೆ ಅನುಭವ ನಕ್ಷೆ ಸಲ್ಲಿಸಿದ್ದು, ಸದರಿ ನಕ್ಷೆಯಲ್ಲಿ ಸ.ನಂ.55/9 ಪೈಕಿ ವಿಸ್ತೀರ್ಣ:00 ಎಕರೆ 10 ಸೆಂಟ್ಸ್; ಜಮೀನು ಹಾಲಿ ಕೆ.ಬಸವರಾಜ ತಂದೆ ಷಣ್ಮುಖಪ್ಪ ಅನುಭವದಲ್ಲಿದ್ದ ಪ್ರದೇಶ. ಷಣ್ಮುಖಪ್ಪನವರು ಖರೀದಿಸಿದ್ದು ಗಂಗಮ್ಮ, ವೀರಣ್ಣ ನೀರ್ಲಿಗಿಯವರಿಂದ. ಕ್ರಯಕ್ಕೆ ಕೊಟ್ಟವರ ವಿಸ್ತೀರ್ಣ:00 ಎಕರೆ 10 ಸೆಂಟ್ಸ್; ಹಾಲಿ ವಿಸ್ತೀರ್ಣದಲ್ಲಿರುತ್ತದೆಂದು ಈ ಬಗ್ಗೆ ತಾಲೂಕ ಸರ್ವೇಯರ್, ಹಗರಿಬೊಮ್ಮನಹಳ್ಳಿ ಇವರು ವರದಿ ನೀಡಿರುತ್ತಾರೆ.
3. ಆದರೆ, ಕ್ರಯಕ್ಕೆ ಪಡೆದ ದಿನದಿಂದಲೂ ಈ ವರೆಗೂ ವಾದಿಗಳ ಹೆಸರು ಪಹಣಿಯಲ್ಲಿ ನಮೂದಾಗಿರುವುದಿಲ್ಲ.

4. 1968-69 ರಿಂದ 2015-16 ರವರೆಗಿನ ಪಹಣಿ ಪತ್ರಿಕೆಯ ಕಾಲಂ 9 ರಲ್ಲಿ ವಿಕ್ರಯದಾರರಾದ ಗಂಗಮ್ಮ ಇವರ ಗಂಡನಾದ ನಿರ್ಲಿಗಿ ವೀರಬಸಪ್ಪ ತಂದೆ ಮಹಾಂತಪ್ಪ ಜಿ.ಕೋಡಿಯಳ್ಳಿ ಇವರ ಹೆಸರಿನಲ್ಲಿ ನಮೂದಾಗಿರುವುದು ಕಂಡುಬಂದಿರುತ್ತದೆ.
5. ಸದರಿ ವ್ಯಾಜ್ಯದ ಜಮೀನಿಗೆ ಸಂಬಂಧಿಸಿದಂತೆ, ಡಯಾಗ್ಲಾಟ್ ಪ್ರತಿಯನ್ನು ಲಗತ್ತಿಸಿದ್ದು, ಸದರಿ ಸ.ನಂ.55/ಎ ಪೈಕಿ ವಿಸ್ತೀರ್ಣ:02 ಎಕರೆ 40 ಸೆಂಟ್ಸ್; ಜಮೀನು ಚಂಡೂರು ಭೀಮಪ್ಪ ಎಂದು ನಮೂದು ಇದ್ದು, ಪಟ್ಟಾ ಜಮೀನಾಗಿರುತ್ತದೆ.
6. ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ ಇವರು ಸಲ್ಲಿಸಿದ ಮೂಲ ಕಡತದಲ್ಲಿಯ ಕಂದಾಯ ನಿರೀಕ್ಷಕರ ವರದಿಯನ್ನು ಪರಿಶೀಲಿಸಲಾಗಿ, ಸದರಿ ವರದಿ ಹಾಗೂ ವರದಿಯಲ್ಲಿನ ಹೇಳಿಕೆ, ಮಹಜರು ನಲ್ಲಿ ಪ್ರತಿವಾದಿ-2 ರಿಂದ 4 ರವರುಗಳೆಲ್ಲ ಮೃತರಾಗಿದ್ದು, ಇವರುಗಳು ಜೀವಂತ ಇದ್ದ ಕಾಲಕ್ಕೆ ವಾದಿಗಳಿಗೆ ನೋಂದಾಯಿತ ಕ್ರಯ ದಸ್ತಾವೇಜಿನ ಮೂಲಕ ಕ್ರಯಕ್ಕೆ ನೀಡಿರುವುದಾಗಿ, ಆ ಪ್ರಕಾರವಾಗಿ ಸದರಿ ವ್ಯಾಜ್ಯದ ಜಮೀನಿನ ಸ್ವಾಧೀನಾನುಭವವನ್ನು ಹೊಂದಿರುವುದಾಗಿ, ಅದರೆ ಕ್ರಯದಾರರಾದ ಷಣ್ಮುಖಪ್ಪ ಇವರು ದಿನಾಂಕ:26.05.2000 ರಂದು ನಿಧನರಾಗಿರುತ್ತಾರೆಂದು, ಸದರಿಯವರ ವಾರಸ ಹೆಂಡತಿ ಹಾಲಮ್ಮ ಇವರು ಅಂದಾಜು ದಿನಾಂಕ:05.06.2005 ರಂದು ಮರಣ ಹೊಂದಿರುತ್ತಾರೆಂದು, ಇವರ ವಾರಸ ಮಕ್ಕಳಾದ ಬಸವರಾಜ, ಕೊಟ್ರೇಶಪ್ಪ ಇವರು ಮೌಖಿಕವಾಗಿ ಪಾಲು ವಿಭಾಗ ಮಾಡಿಕೊಂಡಿದ್ದು, ಸದರಿ ವ್ಯಾಜ್ಯದ ಜಮೀನು ಕೊಳಚಿ ಬಸವರಾಜ ತಂದೆ ಷಣ್ಮುಖಪ್ಪ ಇವರ ಅನುಭವ ಮತ್ತು ಆಧೀನದಲ್ಲಿರುತ್ತದೆಂದು, ಕಾರಣ ಸದರಿ ವ್ಯಾಜ್ಯದ ಜಮೀನನ್ನು ಕ್ರಯ, ಪೋತಿ, ಅನುಭವದ ಪ್ರಕಾರ ಮೂಲ ಪಟ್ಟಾದಾರರ ಹೆಸರನ್ನು ಕಡಿಮೆ ಮಾಡಿ ವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಹೇಳಿಕೆ, ಮಹಜರು, ಇ.ಸಿ., ಅನುಭವ ನಕ್ಷೆ, ವಂಶವೃಕ್ಷ, ಹಾಗೂ ಇತರೆ ದಾಖಲೆಗಳೊಂದಿಗೆ ಸೂಕ್ತ ಕ್ರಮಕ್ಕಾಗಿ ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ ಇವರಿಗೆ ವರದಿ ಸಲ್ಲಿಸಿರುವುದು ಕಂಡು ಬಂದಿರುತ್ತದೆ.
7. ವಾದಿಗಳು ಹಳೆ ಕ್ರಯ ಪತ್ರದ ಪ್ರಕಾರ ಸದರಿ ವ್ಯಾಜ್ಯದ ಜಮೀನನ್ನು ತಮ್ಮ ಹೆಸರಿಗೆ ಹಕ್ಕು ಬದಲಾವಣೆ ಮಾಡಿಸಿಕೊಡಲು ಅರ್ಜಿ ಸಲ್ಲಿಸಿದ್ದು, ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ ಇವರು ಸಂ/ಕಂ/ಪಹಣಿ/ಹಳೆಕ್ರಯಪತ್ರ/12/2015-16 ದಿನಾಂಕ:18.08.2015 ರ ಮೂಲಕ ಹಾಲಿ ಪಹಣಿಯಲ್ಲಿನ ದಾಖಲೆ, ಇ.ಸಿ.ಗೆ ವ್ಯತ್ಯಾಸ ಕಂಡುಬಂದಿರುವುದರಿಂದ ಹಳೆ ಕ್ರಯ ಪತ್ರದ ಪ್ರಕಾರ ಹಕ್ಕು ಬದಲಾವಣೆಗೆ ಕ್ರಮಕೈಗೊಳ್ಳಲು ಅವಕಾಶ ಇರುವುದಿಲ್ಲ. ಕಾರಣ ತಾವು ಸದರಿ ವಿಷಯದ ಬಗ್ಗೆ ಅಗತ್ಯ ದಾಖಲೆಗಳೊಂದಿಗೆ ಸಕ್ಷಮ ಪ್ರಾಧೀಕಾರಕ್ಕೆ ಮನವಿ ಸಲ್ಲಿಸಿ ಪರಿಹಾರ ಕಂಡುಕೊಳ್ಳಲು ಸೂಚಿಸಿ ಹಿಂಬರಹ ನೀಡಿರುವ ಮೇರೆಗೆ, ಸದರಿ ಹಿಂಬರಹದಿಂದ ಬಾದಿತಗೊಂಡ ವಾದಿಯು ತಮ್ಮ ಹೆಸರಿಗೆ ನೋಂದಾಯಿತ ಕ್ರಯ ಪತ್ರದ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಸದರಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಲಾಗಿ ಹಾಗೂ ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ ಹಾಗೂ ಪ್ರಕರಣದಲ್ಲಿಯ ದಾಖಲೆಗಳ ಆಧಾರದ ಮೇಲೆ, ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ ಜಿ.ಕೋಡಿಹಳ್ಳಿ ಗ್ರಾಮದ ಸ.ನಂ.55/9 ಪೈಕಿ ವಿಸ್ತೀರ್ಣ:00 ಎಕರೆ 10 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಮೂಲ ಪಟ್ಟಾದಾರರ ಹೆಸರನ್ನು ಕಡಿಮೆ ಮಾಡಿ ನೋಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ: 484/1972-73 ದಿನಾಂಕ:15.06.1972 ರ ಪ್ರಕಾರ ಕ್ರಯದಾರರ ನೇರ ವಾರಸುದಾರರಾದ ವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಈ ಕೆಳಕಂಡತೆ

ಕೆ ಪ್ರಭಾಕರ

**-: ಆದೇಶ :-**

ಪೀಠಿಕೆಯಲ್ಲಿ ವಿವರಿಸಿದ ಸಮದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ **ಅಪೀಲನ್ನು ಅಂಗೀಕರಿಸುತ್ತಾ,** ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ ಜಿ.ಕೋಡಿಹಳ್ಳಿ ಗ್ರಾಮದ ಸ.ನಂ.55/9 ಪೈಕಿ ವಿಸ್ತೀರ್ಣ:00 ಎಕರೆ 10 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ನೋಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ: 484/1972-73 ದಿನಾಂಕ:15.06.1972 ರ ಪ್ರಕಾರ ಕ್ರಯದಾರರ ನೇರ ವಾರಸುದಾರರಾದ ವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:28.04.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

ಸಹಿ ಮಾಡಿದೆ : 4/5/16
ದಿನಾಂಕ :
:

[ ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ ]
ಸಹಾಯಕ ಆಯುಕ್ತರು,
ಹೊಸಪೇಟೆ.

ವಾದಿ : ಪ್ರತಿವಾದಿಗಳಿಗೆ

ಪ್ರತಿಯನ್ನು:- ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ ಇವರಿಗೆ ಸಂಬಂಧಿಸಿದ ಮೂಲ ಕಡತದೊಂದಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.